# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)

## ವಾರ್ಡ್‌ಸಮಿತಿಸಭೆ, ದಿನಾಂಕ: 07–08–2021ರ

### ಸಭಾ ನಡುವಳಿ

**ದಿನಾಂಕ: 07–08–2021**ರಂದು ಬೆಳಿಗ್ಗೆ **11.00** ಗಂಟೆಗೆ ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯನೋಡಲ್ ಅಧಿಕಾರಿಗಳಾದ ಶ್ರೀ ರೆಡ್ಡಿ ಶಂಕರಬಾಬು, ಮಾನ್ಯ ವಿಶೇಷ ಆಯುಕ್ತರು, (ಆಸ್ತಿಗಳು) ಬಿಬಿಎಂಪಿ ರವರಅಧ್ಯಕ್ಷತೆಯಲ್ಲಿಹೆಗಡೆನಗರ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಬಿಬಿಎಂಪಿ ಸಮುದಾಯಭವನದಲ್ಲಿ ನಡೆದ ವಾರ್ಡ್‌ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ರೆಡ್ಡಿ ಶಂಕರ ಬಾಬು | ನೋಡಲ್ ಅಧಿಕಾರಿಗಳು ವಾರ್ಡ್ ನಂ 06(ಥಣಿಸಂದ್ರ) ಹಾಗೂ ಮಾನ್ಯ ವಿಶೇಷ ಆಯುಕ್ತರು (ಆಸ್ತಿಗಳು), ಬಿಬಿಎಂಪಿ |
| 2 | ಶ್ರೀ ಸುರೇಶದೇವತರಾಜ್ | ಸಹಾಯಕಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಶ್ರೀಮತಿ ಡಾ॥ ಕೇಶವಪಾಣಿ | ವೈದ್ಯಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ, ಹೆಗಡೆನಗರ |
| 4 | ಶ್ರೀ ರಾಜಶೇಖರ್ ಮೇಟಿ | ಸ.ಕಾ.ಅ ಬಿ.ಡಬ್ಲೂ.ಎಸ್.ಎಸ್.ಬಿ,ನಿರ್ವಹಣೆ |
| 5 | ಶ್ರೀಮತಿ ಚಿತ್ರಾ ಜಯರಾಮ್ | ಸ.ಕಾ.ಅ ಘನತ್ಯಾಜ್ಯ ವಿಭಾಗ, ಬ್ಯಾಟರಾಯನಪುರ |
| 6 | ಶ್ರೀ ಕಿರಣ್ ಬಿ | ಸ.ಕಾ.ಅ ಯೋಜನಾ ವಿಭಾಗ, ಯಲಹಂಕ ವಲಯ ಬಿಬಿಎಂಪಿ |
| 7 | ಶ್ರೀ ವರುಣ್ | ಸ.ಅ, ರ.ಮೂ.ಸೌ, ಯಲಹಂಕ ವಲಯ |
| 8 | ಶ್ರೀ ವೇಣುಪ್ರಿಯಾ ಎಸ್ | ಸ.ಅ, ಬಿ.ಡಬ್ಲೂ.ಎಸ್.ಎಸ್.ಬಿ |
| 9 | ಶ್ರೀ ಕೆ.ಆರ್ ಗಂಗಾಧರಯ್ಯ | ಕಿ.ಅ, ಬೆಸ್ಕಾಂ ಇಲಾಖೆ |
| 10 | ಶ್ರೀ ಸಂಗೀತಾ ಪಿ.ವಿ | ಚಿಕ್ಕಜಾಲ ಸಂಚಾರಿ ಪೋಲಿಸ್ ಠಾಣೆ |
| 11 | ಶ್ರೀ ತಿಮ್ಮೇಗೌಡ | ಎ.ಎಸ್.ಐ ಹೆಣ್ಣೂರು ಪೋಲಿಸ್ ಠಾಣೆ |
| 12 | ಶ್ರೀ ಪ್ರೇಮಕುಮಾರ್ | ಹಿರಿಯಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 06 (ಥಣಿಸಂದ್ರ) |
| 13 | ಶ್ರೀ ಮಹೇಶ್ | ಕಿರಿಯಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 06 (ಥಣಿಸಂದ್ರ) |
| 14 | ಎಂ.ಡಿ ರಾಜೇಶ್ | ಕಂದಾಯ ನೀರಿಕ್ಷಕರು, ಥಣಿಸಂದ್ರ |
| 15 | ಶ್ರೀ ಎ.ಎನ್ ವೆಂಕಟೇಶ್ | ಕಂದಾಯ ನೀರಿಕ್ಷಕರು, ಥಣಿಸಂದ್ರ |

**ಶ್ರೀ ಸುರೇಶದೇವತರಾಜ್**ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ **ಶ್ರೀ ರೆಡ್ಡಿ ಶಂಕರ ಬಾಬು, ಮಾನ್ಯ ವಿಶೇಷ ಆಯುಕ್ತರು, (ಆಸ್ತಿಗಳು) ಬಿಬಿಎಂಪಿ ರವರಿಗೆ** ಹಾಗೂಸಭೆಗೆಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತುವಿವಿಧ ಬಡಾವಣೆಯಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಕೋವಿಡ್ –19 ರ ಸಂಬಂಧ ಸೋಂಕು ಹರಡವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮಂಜಾಗ್ರತ ಕ್ರಮಗಳ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ**

- ಕೋವಿಡ್ ಸೋಂಕಿನ 3ನೇ ಅಲೆ ಪ್ರಾರಂಭವಾಗುವ ಲಕ್ಷಣಗಳಿದ್ದು, ಸಾರ್ವಜನಿಕರು ತುಂಬ ಜಾಗರುಕತೆ ವಹಿಸಿ ಕಡ್ಡಾಯವಾಗಿ ಕೋವಿಡ್ ನಿಯಮಗಳನ್ನು ಪಾಲಿಸಬೇಕಾಗಿ ತಿಳಿಸಿದರು.
- ವ್ಯಾಕ್ಸಿನೇಷನ್‌ಗೆ ಸಂಬಂಧಿಸಿದಂತೆ ಪ್ರತಿ ದಿನ ನೀಡುವ ಲಸಿಕೆಯ ವಿವರಗಳನ್ನು ಕಡ್ಡಾಯವಾಗಿ ಲಸಿಕಾ ಕೇಂದ್ರಗಳಲ್ಲಿ ನಾಮಫಲಕದ ಮೇಲೆ ಪ್ರದರ್ಶನ ಮಾಡಬೇಕಾಗಿ ಆರೋಗ್ಯ ವೈದ್ಯಾಧಿಕಾರಿಗಳಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯ ಎಲ್ಲಾ ಹೋಟೆಲ್‌ಗಳ ಸಿಬ್ಬಂಧಿಗಳು, ರಸ್ತೆ ಬದಿ ವ್ಯಾಪಾರ ಮಾಡುವವರು ಲಸಿಕೆ ಪಡೆದಿದ್ದಾರೆ ಎಂಬ ಬಗ್ಗೆ ಹಿರಿಯಆರೋಗ್ಯ ಪರಿವೀಕ್ಷಕರುಪರಿಶೀಲಿಸಬೇಕು ಹಾಗೂ ಹೋಟೆಲ್‌ಗಳಲ್ಲಿ ಎಲ್ಲಾ ಸಿಬ್ಬಂದಿಗಳು ಲಸಿಕೆ ಪಡೆದಿರುವ ಬಗ್ಗೆ ಕಡ್ಡಾಯವಾಗಿ ಪ್ರದರ್ಶಿಸಲು ಸೂಚನೆ ನೀಡಬೇಕಾಗಿ ತಿಳಿಸದರು.
- **ಶ್ರೀಮತಿ ಪೂರ್ಣಿಮಾ**ಭುವನೇಶ್ವರಿನಗರ ರವರು ಮಾತನಾಡಿ ಭುವನೇಶ್ವರಿನಗರ ಬಡಾವಣೆಯಲ್ಲಿ ಸಾರ್ವಜನಿಕರಿಗೆ ಲಸಿಕೆ ವಿತರಣೆಗೆ ಕ್ಯಾಂಪ್ ಅನ್ನು ಹಮ್ಮಿಕೊಳ್ಳುವಂತೆ ಕೋರಿದರು.
- **ಶ್ರೀ ದಾಸಪ್ಪ ಹೆಗಡೆನಗರ** ರವರು ಮಾತನಾಡಿ ಲಸಿಕೆಯ ವಿತರಣೆ ಬಗ್ಗೆ ಸಾರ್ವಜನಿಕರಿಗೆ ಸ್ಪಷ್ಟವಾದ ಮಾಹಿತಿ ಲಭ್ಯವಾಗದೆ ಇರುವುದರಿಂದ ಸಾರ್ವಜನಿಕರು ಗೊಂದಲದಲ್ಲಿದ್ದು, ಲಸಿಕೆಯ ವಿತರಣೆ ಬಗ್ಗೆ ಆರೋಗ್ಯ ವೈದ್ಯಾಧಿಕಾರಿಗಳು ಪ್ರತಿದಿನ ಸ್ಪಷ್ಟವಾದ ಮಾಹಿತಿ ನೀಡಬೇಕಾಗಿ ಕೋರಿದರು.

2. **ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂದಿಸಿದ ವಿಷಯಳ ಬಗ್ಗೆ**

- ಹೆಗಡೆನಗರ ಪೂರ್ವ ಭಾಗದಲ್ಲಿ ಕೈಗೊಂಡಿರುವ ಒಳಚರಂಡಿ ಕಾಮಗಾರಿಯನ್ನು ಸಮಪರ್ಕವಾಗಿ ನಿರ್ವಹಿಸಲು ಶ್ರೀ ದಾಸಪ್ಪ ಹೆಗಡೆನಗರ ರವರು ಕೋರಿದರು.
- ಪ್ರಶಾಂತಿನಗರ ನಿವಾಸಿಗಳು ಮಾತನಾಡಿ, ಪ್ರಶಾಂತಿನಗರ 1 ರಿಂದ 5 ವರಗೆಅಡ್ಡರಸ್ತೆಗಳಿದ್ದು, 2ನೇ 3ನೇ ಮತ್ತು 4ನೇ ಅಡ್ಡ ರಸ್ತೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಒಂದು ಹೊಸದಾಗಿ ಕೊಳಬೆ ಬಾವಿಯನ್ನು ಕೊರೆಸಲು ಕೋರಿದರು.

3. **ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ**

- **ಶ್ರೀಮತಿ ಪೂರ್ಣಿಮಾ,** ಭುವನೇಶ್ವರಿನಗರ ರವರು **ಮಾತನಾಡಿ** ಭುವನೇಶ್ವರಿನಗರದಲ್ಲಿ ಘನತ್ಯಾಜ್ಯ ವಿಲೇವಾರಿ ಸಮಪರ್ಕವಾಗಿ ಆಗುತ್ತಿರುವುದಿಲ್ಲ ಇದರಿಂದ ಬ್ಲಾಕ್‌ಸ್ಪಾಟ್‌ಗಳು ಹೆಚ್ಚಾಗುತ್ತಿರುತ್ತವೆ ಎಂದು ತಿಳಿಸಿದರು.
- **ಶ್ರೀ ರಾಜಗೋಪಾಲ್, ಭಾಗ್ಯಶ್ರೀ ಬಡಾವಣೆ ರವರು ಮಾತನಾಡಿ** ಹಸಿ ಮತ್ತು ಒಣ ಕಸ ತ್ಯಾಜ್ಯವನ್ನು ಸಮಪರ್ಕವಾಗಿ ಸಂಗ್ರಹಣೆ ಮಾಡುತ್ತಿರುವುದಿಲ್ಲವೆಂದು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಅಸಮರ್ಪಕವಾಗಿರುವ ಬಗ್ಗೆ ಸಾರ್ವಜನಿಕರು ದೂರುತ್ತಿದ್ದು, ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯವನ್ನು ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡಲು ಸಂಬಂಧಪಟ್ಟ ಸ.ಕಾ.ಅ ರವರು ಕ್ರಮ ವಹಿಸಬೇಕೆಂದು ಮಾನ್ಯ ನೊಡೆಲ್ ಅಧಿಕಾರಿಗಳು ತಿಳಿಸಿದರು.

4. **2021–22ನೇ ಸಾಲಿನ ಅನುದಾನದ ಬಳಕೆಯ ಕ್ರಿಯಾ ಯೋಜನೆಯ ಬಗ್ಗೆ:** ಬಿಬಿಎಂಪಿ ಆಯವ್ಯಯದಲ್ಲಿ ನಿರ್ವಹಣೆ ಮತ್ತು ಅಭಿವೃದ್ಧಿ ಹೊಸ ಕಾಮಗಾರಿಗಳಿಗೆ ಮೀಸಲಿಟ್ಟಿರುವ ಅನುದಾನವನ್ನು ಮಾನ್ಯ ಮುಖ್ಯ

ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ. ಮು.ಆ/ಪಿ.ಆರ್/1113/21–22, ದಿ. 26.07.2021 ರಲ್ಲಿ ವಲಯವಾರು ಅನುದಾನವನ್ನು ಹಂಚಿಕೆ ಮಾಡಿದ್ದು, ಹಾಗೂ ಕ್ರಿಯಾ ಯೋಜನೆಯನ್ನು ತಯಾರಿಸುವ ಬಗ್ಗೆ ನೀಡಿರುವ ನಿರ್ದೇಶನದಂತೆ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿ ವಾರ್ಡ್ ನಂ. 06ರಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಿಯಾ ಯೋಜನೆಯನ್ನು ತಯಾರಿಸಲಾಯಿತು.

## ACTION PLAN FOR THE WORKS UNDER 2021-22 GRANTS P-CODE 1802 & P-CODE-3726 IN WARD NO. 06 THANISANDRA

| SL. NO | BUDGET CODE | P-CODE | NAME OF WORK | AMOUNT IN LAKHS |
|---|---|---|---|---|
| 1 | 05-220801 | P1802 | Maintenance of water supply Existing borewells at Dasarahalli, Rachenahalli Surrounding area in Ward No. 06 Byatarayanapura Sub Division | 25.00 |
| 2 | 05-220801 | P1802 | Maintenance of water supply Existing borewells at Thanisandra Hegadenagara and Surrounding area in Ward No. 06 Byatarayanapura Sub Division | 25.00 |
| | | | **Total 1** | **50.00** |
| 3 | 05-220610 | P3726 | Pot hole filling to Roads in Ward No.06 (Thanisandra) Surrounding area Byatarayanapura Sub Division. | 20.00 |
| 4 | 05-220610 | P3726 | Repairs and Maintenance of Roads and Drains in Ward No 06 Byatarayanapura Sub Division | 20.00 |
| 5 | 05-220610 | P3726 | Supply of water through water tanker in water scarcity area in Ward No.06 Surrounding area Byatarayanapura sub division. | 10.00 |
| 6 | 05-220610 | P3726 | Construction of Culverts at Dasarahalli Surrounding area in ward no. 06, Byatarayanapura Sub Division | 10.00 |
| 7 | 05-220610 | P3726 | Construction of Culverts at Thanisadnra Surrounding area in ward no. 06, Byatarayanapura Sub Division | 10.00 |
| 8 | 05-220610 | P3726 | Construction of Culverts and Improvements to drain Bharatnagar cross road in Ward No.06 Byatarayanapura Sub Division | 12.00 |
| | | | **Total 2** | **82.00** |

ಲೆಕ್ಕ ಶೀರ್ಷಿಕೆ 05–2208011 ಪಿ–1802 ರ ಅಡಿಯಲ್ಲಿ ಪ್ರತಿ ವಾರ್ಡ್‌ಗೆ ಕುಡಿಯುವ ನೀರಿಗಾಗಿ ರೂ. 20.00 ಲಕ್ಷಗಳು ಮಾತ್ರ ಅನುದಾನ ನಿಗಧಿಪಡಿಸಿದ್ದು, ವಾರ್ಡ್ ನಂ. 06ರ ವ್ಯಾಪ್ತಿಯು 110 ಹಳ್ಳಿಗಳಿಗೆ ಸೇರಿರುವ ವಾರ್ಡ್ ಆಗಿದ್ದು, ಈ ಪ್ರದೇಶಗಳಿಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಿಂದ ಕಾವೇರಿ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಇಲ್ಲದೇ ಇರುವುದರಿಂದ ಬಿಬಿಎಂಪಿಯ ವತಿಯಿಂದಲೇ ಕೊಳವೆ ಬಾವಿಗಳ ಮುಖಾಂತರ ನೀರು ಸರಬರಾಜು ಮತ್ತು ನಿರ್ವಹಣೆಯನ್ನು ನಿರ್ವಹಿಸಲಾಗುತ್ತಿರುತ್ತದೆ. ಆದ್ದರಿಂದ ವಾರ್ಡ್ ನಂ. 06ಕ್ಕೆ ಕುಡಿಯುವ ನೀರಿನ ಸರಬರಾಜು ಮತ್ತು ನಿರ್ವಹಣೆಗಾಗಿ ಕನಿಷ್ಟ ರೂ. 50.00 ಲಕ್ಷಗಳ ಅನುದಾನ ಅವಶ್ಯಕವಾಗಿರುತ್ತದೆ. ಆದ್ದರಿಂದ ಈ ವಾರ್ಡ್‌ಗೆ ಹೆಚ್ಚಿನ ಅನುದಾನವನ್ನು ಒದಗಿಸಲು ಮೇಲಾಧಿಕಾರಿಗಳಿಗೆ ಕೋರಲು ಸಭೆಯಲ್ಲಿ ತೀರ್ಮಾನಿಸಲಾಯಿತು.

5. **ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಬಗ್ಗೆ.**

- ಶ್ರೀ ದಾಸಪ್ಪ ಹೆಗಡೆನಗರ ರವರು ಮಾತನಾಡಿ ಹೆಗಡೆನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಬೀದಿ ದೀಪಗಳು ಹಾಳಾಗಿದ್ದು, ಇವುಗಳನ್ನು ಸರಿಪಡಿಸುವಂತೆ ಕೋರಿದರು.
- ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರದೇಶಗಳಲ್ಲಿ ದುರಸ್ತಿಯಲ್ಲಿರುವ ಬೀದಿ ದೀಪಗಳು ಸರಿಪಡಿಸಲು ಕ್ರಮವಹಿಸಲು ಸೂಚಿಸಿದರು.

6. **ಇನ್ನಿತರೆ ವಿಷಯಗಳು ಮಾನ್ಯ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ**

- **ಶ್ರೀ ದಾಸಪ್ಪ, ಹೆಗಡೆನಗರ ನಿವಾಸಿರವರು ಮಾತನಾಡಿ** ಥಣಿಸಂದ್ರ ಮುಖ್ಯರಸ್ತೆಯಲ್ಲಿ ವಾಹನ ಸಂಚಾಯ ಹೆಚ್ಚಾಗಿದ್ದು, ಅವಶ್ಯಕತೆ ಇರುವ ಕಡೆ ಹೆಚ್.ಆರ್.ಪಿ.ಸಿ ಅಳವಡಿಸಲು ಕ್ರಮ ವಹಿಸಲು ಕೋರಿದರು ಇದಕ್ಕೆ ಚಿಕ್ಕಜಾಲ ಸಂಚಾರಿ ಪೋಲಿಸ್ ರವರು ಮಾತನಾಡಿ ಸಂಬಂಧಪಟ್ಟವರಿಂದ ಪ್ರಸ್ತಾವನೆ ಬಂಧಲ್ಲಿ ಪರಿಶೀಲಿಸಿ ಅನುಮತಿ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು ಹಾಗೂ ವಾರ್ಡ್‌ನ ಸಹಾಯಕ ಕಂದಾಯ ಅಧಿಕಾರಿಗಳು ಸಭೆಗೆ ಹಾಜರಾಗುತ್ತಿರುವುದಿಲ್ಲ. ಮುಂದಿನ ಸಭೆಗೆ ಹಾಜರಾಗಲು ಕೋರಿದರು.
- **ಶ್ರೀ ಶ್ರೀನಿವಾಸ್‌ರಾವ್** ರವರು ಮಾತನಾಡಿ, ವಾರ್ಡ್ ನಂ. 06ರ Deter Committee ವಿವರವನ್ನು ನೀಡಬೇಕೆಂದು, ಅಮರಜ್ಯೋತಿ ಬಡಾವಣೆಯಲ್ಲಿ ರಸ್ತೆಗಳನ್ನು ಕೂಡಲೇ ಡಾಂಬರೀಕರಣ ಮಾಡುವಂತೆ ಕ್ರಮ ವಹಿಸಲು ಮತ್ತು ಸರಾಯಿಪಾಳ್ಯ ಪ್ರದೇಶಕ್ಕೆ ಅಧಿಕೃತವಾಗಿ ವಿದ್ಯಾಸಾಗರವೆಂದು ಮರುನಾಮಕರಣ ಮಾಡಲು ಕ್ರಮ ವಹಿಸುವಂತೆ ಕೋರಿದರು.
- **ಶ್ರೀಮತಿ ಪೂರ್ಣಿಮಾ, ಭುವನೇಶ್ವರಿನಗರ ರವರು ಮಾತನಾಡಿ** ಭುವನೇಶ್ವರಿನಗರ 3ನೇ, 4ನೇ ಮತ್ತು 5ನೇ ಅಡ್ಡರಸ್ತೆಯಲ್ಲಿ ಈಗಾಗಲೇ ಜಲ್ಲಿ ಹರಡಿದ್ದು, ಕೂಡಲೇ ರಸ್ತೆ ಡಾಂಬರೀಕರಣ ಮಾಡಲು ಮತ್ತು ಬಡಾವಣೆಯ ರಸ್ತೆ ಪಕ್ಕದಲ್ಲಿ ವಿದ್ಯುತ್ ತಂತಿಗೆ ತಗಲುವ ಮರದ ಕೊಂಬೆಗಳನ್ನು ಕಡಿದು ಕೊಂಬೆಗಳನ್ನು ಕೂಡಲೇ ತೆರವುಗೊಳಿಸಲು ಸಂಬಂಧಪಟ್ಟ ಬೇಸ್ಕಾಂ ಅಧಿಕಾರಿಗಳಿಗೆ ಸೂಚಿಸಲು ಕೋರಿದರು.
- **ಶ್ರೀ ನಾಗನಾಥ, ಭುವನೇಶ್ವರಿನಗರ ರವರು ಮಾತನಾಡಿ** ಭುವನೇಶ್ವರಿನಗರದ ಬಹಳಷ್ಟು ಅಡ್ಡರಸ್ತೆಗಳಿಗೆ ನಾಮಫಲಕಗಳು ಇರುವುದಿಲ್ಲ. ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಹೊಸದಾಗಿ ನಾಮಫಲಕಗಳನ್ನು ಅಳವಡಿಸಲು ಕ್ರಮ ವಹಿಸಲು ಕೋರಿದರು.
- **ಶ್ರೀ ರಾಜಗೋಪಾಲ್, ಭಾಗ್ಯಶ್ರೀ ಬಡಾವಣೆ ರವರು ಮಾತನಾಡಿ** ಭಾಗ್ಯಶ್ರೀ ಬಡಾವಣೆಯ ರಸ್ತೆಗಳಿಗೆ ಡಾಂಬರೀಕರಣ ಮಾಡುವ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಹಾಗೂ ಸದರಿ ಬಡಾವಣೆಯಲ್ಲಿ ಹಾದು ಹೋಗಿರುವ ಮಳೆ ನೀರಿನ ಚರಂಡಿಗಳನ್ನು ಸ್ವಚ್ಚಗೊಳಿಸಲು ಕೋರಿದರು.
- **ಚಿಕ್ಕಜಾಲ ಪೋಲಿಸ್ ಇನ್ಸ್‌ಪೆಕ್ಟರ್ ರವರು ಮಾತನಾಡಿ** ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ನಿರ್ಮಾಣ ಮಾಡುವುದರಿಂದ ಅಪಘಾತಗಳು ಹೆಚ್ಚಾಗುತ್ತವೆ. ಆದುದರಿಂದ ರಸ್ತೆ ಉಬ್ಬುಗಳನ್ನು ವೈಜ್ಞಾನಿಕ ರೀತಿಯಲ್ಲಿ ನಿರ್ಮಿಸುವುದು ಅವಶ್ಯಕವಾಗಿದ್ದು, ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ರಸ್ತೆ ಉಬ್ಬುಗಳನ್ನುನಿರ್ಮಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಅನುಮತಿ ನೀಡಲಾಗುವುದೆಂದು ತಿಳಿಸಿದರು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಬೇರೆ ಬೇರೆ ಏಜೆನ್ಸಿಗಳು ಕಾಮಗಾರಿಗಳು ಕೈಗೊಂಡಿದ್ದು, ಪ್ರಗತಿಯಲ್ಲಿರುವ ಸ್ಥಳಗಳಲ್ಲಿ ಅಪಘಾತಗಳು ವಾಗುವ ಸಂಭವ ವಿರುವದರಿಂದದರಿಂದ ಕಡ್ಡಾಯವಾಗಿ ಬ್ಯಾರಿಕೇಡಿಂಗ್ ಅಳವಡಿಸಲು ಕ್ರಮ ವಹಿಸಲು ಕೋರಿದರು.
- **ಶ್ರೀ ಎಂ. ಡಿ. ರಾಜೇಶ್** ಕಂದಾಯ ನೀರಿಕ್ಷಕರು, ಥಣಿಸಂದ್ರ ರವರು ಮಾತನಾಡಿ ವಾರ್ಡ್ ನಂ 06 ರಲ್ಲಿ ಶ್ರೀ ಅರುಣ ಕುಮಾರ ಬಿ.ಎಲ್.ಓ ಬೂತ್ ನಂ 344 ಮತ್ತು ಶ್ರೀ ಮಾಧೂರಿಬಾಯಿ ಬಿ.ಎಲ್.ಓ ಬೂತ್ ನಂ 3384 ಕ್ಕೆ ಮತದಾರಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ಸಹಾಯಕ ಕಂದಾಯ ಅಧಿಕಾರಿಗಳು ಬ್ಯಾಟರಾಯನಪುರ

ಉಪವಿಭಾಗ ಕಛೇರಿಯಿಂದ ನಿಯೋಜಿಸಿದ್ದು, ಕೋವೀಡ್-19 ಸೋಂಕಿನಿಂದ ತುತ್ತಾಗಿ ನಿಧನರಾಗಿರುತ್ತಾರೆ ಎಂದು ತಿಳಿಸಿದ್ದು, ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿಯಲ್ಲಿ ಅಥವಾ ಸರ್ಕಾರದ ಬೆರೆಯಾವುದೇ ಯೋಜನೆಯಲ್ಲಿ ಸೂಕ್ತ ಪರಿಹಾರ ಕೋಡುವಂತೆ ಮಾನ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮತ್ತು ಮಾನ್ಯ ಮುಖ್ಯ ಆಯುಕ್ತರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ತಿರ್ಮಾನಿಸಲಾಯಿತು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಿಶೇಷ ಆಯುಕ್ತರು (ಆಸ್ತಿಗಳು) ಬಿ.ಬಿ.ಎಂ.ಪಿ ರವರು ಮಾತನಾಡಿ ಮೇಲ್ಕಂಡಂತೆ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರೀಗಣಿಸಿ ಎಲ್ಲಾದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

07-08-2021
ಕಾರ್ಯದರ್ಶಿ
ಹಾಗೂ ಸಹಾಯಕಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)

07.08.21
ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)
ಹಾಗೂ ವಿಶೇಷ ಆಯುಕ್ತರು(ಆಸ್ತಿಗಳು)ಬಿ.ಬಿ.ಎಂ.ಪಿ

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.